ರಾಕೇಶ್ ಸಿಂಗ್, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖೆ

ಫ್ಯಾಕ್ಸ್ ಸಂಖ್ಯೆ: 080–2225 1011
ಕಛೇರಿ ದೂರವಾಣಿ: 080–2235 3991
ಕರ್ನಾಟಕ ಸರ್ಕಾರದ ಸಚಿವಾಲಯ
3ನೇ ಗೇಟ್, ಮೊದಲನೇ ಮಹಡಿ,
ಎಂ.ಎಸ್. ಬಿಲ್ಡಿಂಗ್, ಬೆಂಗಳೂರು – 560 001
ಇ-ಮೇಲ್: prlsecy-wc@karnataka.gov.in

ಸಂ.ಕೆಎಸ್ಐಸಿಪಿಎಸ್/ಕೋವಿಡ್–19/60/2020–21 ದಿನಾಂಕ:29.04.2020

ಜಿಲ್ಲಾಧಿಕಾರಿಗಳು,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಅಡಿಯಲ್ಲಿ ರೆಸ್ಕ್ಯೂ ಮಾಡಲಾದ ಮತ್ತು ಇಲಾಖೆಯ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಮಕ್ಕಳ ವಿಷಯದಲ್ಲಿ ಹಾಗೂ ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ವಿಷಯದಲ್ಲಿ– ಹೊಸ ದಾಖಲಾತಿ ಮಕ್ಕಳ ಬಗ್ಗೆ.

ಉಲ್ಲೇಖ: 1) ನಿರ್ದೇಶಕರು, ಐಸಿಪಿಎಸ್, ಬೆಂಗಳೂರು ಇವರು ಡಿಸಿಪಿಒಗಳಿಗೆ ಬರೆದ ಪತ್ರ ಸಂ.ಕೆಎಸ್ಐಸಿಪಿಎಸ್ ಕೋವಿಡ್–19/53/2020–21 ದಿನಾಂಕ:25.04.2020

2) ನಿರ್ದೇಶಕರು, ಐಸಿಪಿಎಸ್, ಬೆಂಗಳೂರು ಇವರು ಡಿಸಿಪಿಒಗಳಿಗೆ ಬರೆದ ಪತ್ರ ಸಂ.ಕೆಎಸ್ಐಸಿಪಿಎಸ್/ ಕೋವಿಡ್–19/59/2020–21 ದಿನಾಂಕ:28.04.2020

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್–19 ಮತ್ತು ಲಾಕ್‌ಡೌನ್ ಇದ್ದಾಗ್ಯೂ ಕೂಡ ಬಾಲನ್ಯಾಯ ಕಾಯ್ದೆಯಡಿಯಲ್ಲಿ ಸಂಕಟ ಸ್ಥಿತಿಯಲ್ಲಿರುವ ಮತ್ತು ದೌರ್ಜನ್ಯಕ್ಕೆ ಒಳಗಾಗುತ್ತಿರುವ ಮಕ್ಕಳನ್ನು ಇಲಾಖೆವತಿಯಿಂದ ರೆಸ್ಕ್ಯೂ ಮಾಡುವುದು ಮತ್ತು ಪಾಲನೆ ಮತ್ತು ರಕ್ಷಣೆ ಸೌಲಭ್ಯವನ್ನು ಒದಗಿಸುವುದು ಎಂದಿನಂತೆ ಮುಂದುವರೆಯುತ್ತಿದೆ. ಅಲ್ಲದೇ ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ವಿಷಯದಲ್ಲೂ ಸಹ ಎಂದಿನಂತೆ ಬಾಲನ್ಯಾಯ ಕಾಯ್ದೆಯಡಿ ಸೂಕ್ತ ಕಾನೂನಿನ ಕ್ರಮ ಮುಂದುವರೆಸಲಾಗುತ್ತಿದೆ.

ಪಾಲನೆ ಮತ್ತು ರಕ್ಷಣೆ ಅವಶ್ಯಕವಿರುವ ಹಾಗೂ ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಮಕ್ಕಳ ಹೊಸ ದಾಖಲಾತಿಗಳು ಎಂದಿನಂತೆ ಮುಂದುವರೆಯುತ್ತಿರುವುದರಿಂದ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಈಗಾಗಲೇ ವಾಸ್ತವ್ಯವಿದ್ದ ಮಕ್ಕಳ ಹಿತದೃಷ್ಟಿಯಿಂದ ಹೊಸ ದಾಖಲಾತಿ ಮಕ್ಕಳಿಗೆ ಕೋವಿಡ್–19 ಹಿನ್ನೆಲೆಯಲ್ಲಿ ಕಡ್ಡಾಯವಾಗಿ ಕ್ವಾರಂಟೈನ್ ಮಾಡಬೇಕಾಗಿರುತ್ತದೆ. ಕೋವಿಡ್–19 ಸಂಬಂಧಪಟ್ಟ ಮುನ್ನೆಚ್ಚರಿಕೆಗಳ ಬಗ್ಗೆ ನಿರ್ದೇಶನಾಲಯದಿಂದ ಈಗಾಗಲೇ ದಿನಾಂಕ:18.03.2020 & 23.03.2020ರ ಸುತ್ತೋಲೆಗಳನ್ನು ಹೊರಡಿಸಲಾಗಿರುತ್ತದೆ. ಅಲ್ಲದೇ ಕ್ವಾರಂಟೈನ್ ಕುರಿತು ಪ್ರತ್ಯೇಕವಾಗಿ ಉಲ್ಲೇಖ(1) & (2)ರ ಪತ್ರಗಳನ್ನು ನಿರ್ದೇಶಕರು, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಬೆಂಗಳೂರು ಇವರು ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಈಗಾಗಲೇ ಬರೆದಿರುತ್ತಾರೆ.

ಬೇರೆ ರಾಜ್ಯಗಳಲ್ಲಿ ಕ್ವಾರಂಟೈನ್ ಬಗ್ಗೆ ಪ್ರಚಲಿತದಲ್ಲಿರುವ ಅಂಶಗಳನ್ನು ಒಳಗೊಂಡಂತೆ

Scanned by CamScanner

ಉಲ್ಲೇಖ(1)ರ ಪತ್ರದಲ್ಲಿ ಮಾರ್ಗದರ್ಶನಗಳನ್ನು ನೀಡಲಾಗಿರುತ್ತದೆ. ನಂತರ ಉಲ್ಲೇಖ(1)ರ ಪತ್ರದ ಅಂಶಗಳ ಮೇಲೆ ಕೆಲವು ಜಿಲ್ಲೆಗಳಿಂದ ಸ್ವೀಕೃತವಾದ ಪರಿಶೀಲನೆಗಳು ಹಾಗೂ ಸ್ಪಷ್ಟೀಕರಣ ಬೇಡಿಕೆಗಳನ್ನು ಪರಿಗಣಿಸಿ ಉಲ್ಲೇಖ(2)ರಂತೆ ಹೆಚ್ಚಿನ ಮಾರ್ಗದರ್ಶನಗಳನ್ನು ನೀಡಲಾಗಿರುತ್ತದೆ.

**ರಾಜ್ಯಾದ್ಯಂತ ಇರುವ ಮಕ್ಕಳ ಪಾಲನಾ ಸಂಸ್ಥೆಗಳು(ಸಿಸಿಐ) ಒಂದೊಂದು ಸಂಸ್ಥೆಯು ಒಂದೊಂದು ರೀತಿಯ ಕಟ್ಟಡದಲ್ಲಿದ್ದು, ಸಿಸಿಐಗಳ ಕಟ್ಟಡ ವ್ಯವಸ್ಥೆಯಲ್ಲಿ ಯಾವುದೇ ಏಕರೂಪತೆ ಇರುವುದಿಲ್ಲ. ಆದ್ದರಿಂದ ರಾಜ್ಯಾದ್ಯಂತ ಎಲ್ಲಾ ಸಿಸಿಐಗಳ ವಿಷಯದಲ್ಲಿ ಯಾವುದೋ ಒಂದೇ ರೀತಿಯ ಕ್ವಾರಂಟೈನ್ ವ್ಯವಸ್ಥೆ ಬಗ್ಗೆ ಯೋಚಿಸುವುದು ಅಸಾಧ್ಯವಾದ ವಿಷಯ.**

ಆದ್ದರಿಂದ ಕ್ವಾರಂಟೈನ್ ವ್ಯವಸ್ಥೆ ಬಗ್ಗೆ ಹಲವಾರು ಆಪ್ಷನ್ಸ್‌ನ್ನು ಪರಿಶೀಲಿಸಬೇಕಾಗುತ್ತದೆ. ಉದಾಹರಣೆಗೆ ಪ್ರಸ್ತುತ ಇರುವ ಮಕ್ಕಳ ಪಾಲನಾ ಸಂಸ್ಥೆ ತುಂಬಾ ವಿಶಾಲವಾಗಿದ್ದು, ಅಲ್ಲಿಯೇ ಹೊಸ ದಾಖಲಾತಿ ಮಕ್ಕಳಿಗೆ ಸಂಸ್ಥೆಯಲ್ಲಿ ಈಗಾಗಲೇ ವಾಸ್ತವ್ಯವಿರುವ ಮಕ್ಕಳಿಗೆ ದೂರವಾಗಿರುವ ಕೊಠಡಿಯನ್ನು ಕ್ವಾರಂಟೈನ್‌ಗೆ ಕಾಯ್ದಿರಿಸಿಕೊಳ್ಳಬಹುದೇ, ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಬಹು ಮಹಡಿಗಳಿದ್ದಲ್ಲಿ ಒಂದು ಮಹಡಿಯನ್ನು ಕ್ವಾರಂಟೈನ್‌ಗೆ ಬಳಸಿಕೊಳ್ಳಬಹುದೇ, ಬಾಲನ್ಯಾಯ ಕಾಯ್ದೆಯಡಿಯಲ್ಲಿ ನೋಂದಣಿಯಾದ ಯಾವುದಾದರೂ ಮಕ್ಕಳ ಪಾಲನಾ ಸಂಸ್ಥೆ ಕೋವಿಡ್–19 ಹಿನ್ನೆಲೆಯಲ್ಲಿ ಮಕ್ಕಳು ಮನೆಗೆ ಹೋಗಿರುವುದರಿಂದ ಖಾಲಿ ಇದ್ದಲ್ಲಿ ಸದರಿ ಸಿಸಿಐ ಸಂಸ್ಥೆಯನ್ನು ಕ್ವಾರಂಟೈನ್ ಸಲುವಾಗಿ ಫಿಟ್ ಫೆಸಿಲಿಟಿ ಎಂದು ಬಳಸಿಕೊಳ್ಳಬಹುದೇ, ಜಿಲ್ಲೆಯಲ್ಲಿ ಖಾಲಿಯಿರುವ ಸಮಾಜ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ/ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಹಾಸ್ಟೆಲ್‌ಗಳನ್ನು ಕ್ವಾರಂಟೈನ್ ಸಲುವಾಗಿ ಫಿಟ್ ಫೆಸಿಲಿಟಿ ಎಂದು ಬಳಸಿಕೊಳ್ಳಬಹುದೇ, **ಈ ರೀತಿ ಹಲವಾರು ಆಪ್ಷನ್ಸ್‌ಗಳನ್ನು ಪ್ರತಿಯೊಂದು ಮಕ್ಕಳ ಪಾಲನಾ ಸಂಸ್ಥೆಯ ಕ್ಷೇತ್ರದ ಸಂದರ್ಭ ಹಾಗೂ ಆಯಾ ಜಿಲ್ಲೆಗಳ ಕ್ಷೇತ್ರದ ಸಂದರ್ಭ ಮತ್ತು ಕ್ಷೇತ್ರ ಪರಿಸ್ಥಿತಿಗಳಿಗೆ ಅನುಗುಣವಾಗಿ ವಿವಿಧ ಆಪ್ಷನ್ಸ್‌ಗಳಲ್ಲಿರುವ ಸಾಧಕ–ಬಾಧಕಗಳನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿಯೇ ಸಾಧ್ಯವಾಗುತ್ತದೆ. ಅದರಂತೆ ಈ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳುವುದು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾತ್ರ ಸಾಧ್ಯವಾದ ವಿಷಯವಾಗಿರುತ್ತದೆ.**

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಪ್ರಕಾರ ಯಾವುದೇ ಹೊಸ ದಾಖಲಾತಿ ಮಕ್ಕಳ ವಿಷಯದಲ್ಲಿ ಪಾಲನೆ ಮತ್ತು ರಕ್ಷಣೆ ಅಗತ್ಯವಿರುವ ಮಗುವಾದರೆ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳ ವತಿಯಿಂದ ಹಾಗೂ ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಮಗುವಾದರೆ ಬಾಲನ್ಯಾಯ ಮಂಡಳಿಗಳಿಂದ ಪ್ಲೇಸ್‌ಮೆಂಟ್ ಆರ್ಡರ್‌ನ್ನು ಪಡೆಯಬೇಕಾಗಿರುತ್ತದೆ. ಅಲ್ಲದೇ ಕ್ವಾರಂಟೈನ್ ಸಲುವಾಗಿ ಪ್ರತ್ಯೇಕ ಫಿಟ್ ಫೆಸಿಲಿಟಿ ಸಂಸ್ಥೆಗಳಲ್ಲಿ ಕ್ವಾರಂಟೈನ್/ಪುನರ್ವಸತಿ ವ್ಯವಸ್ಥೆ ಕಲ್ಪಿಸಿಕೊಳ್ಳಬೇಕಾದಲ್ಲಿ ಜಿಲ್ಲಾ ಮಟ್ಟದಲ್ಲಿ ಬಾಲನ್ಯಾಯ ಮಂಡಳಿ ಅಥವಾ ಮಕ್ಕಳ ಕಲ್ಯಾಣ ಸಮಿತಿ ನಿರ್ಧಾರ ಕೈಗೊಳ್ಳಬೇಕಾಗುತ್ತದೆ ಹಾಗೂ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಮತ್ತು ಬಾಲನ್ಯಾಯ ನಿಯಮಾವಳಿಗಳ ನಿಯಮ 2016ರ ಪ್ರಕಾರ ಸದರಿ ಪ್ರತ್ಯೇಕ ವ್ಯವಸ್ಥೆ ಬಗ್ಗೆ ನಿಯಮ 27 ರನ್ವಯ ಫಿಟ್ ಫೆಸಿಲಿಟಿ ಎಂದು ನಮೂನೆ 39ರಲ್ಲಿ ಮಕ್ಕಳ ಕಲ್ಯಾಣ ಸಮಿತಿಯಿಂದ ಅಥವಾ ಬಾಲನ್ಯಾಯ ಮಂಡಳಿಯಿಂದ ಸಂದರ್ಭಕ್ಕನುಗುಣವಾಗಿ ಫಿಟ್ ಫೆಸಿಲಿಟಿ ಎಂದು ಗುರುತಿಸಿಕೊಳ್ಳಬೇಕಾಗುತ್ತದೆ.

ಮೇಲೆ ತಿಳಿಸಿದಂತೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಅಡಿಯಲ್ಲಿ ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಹಾಗೂ ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಹೊಸ ದಾಖಲಾತಿ ಮಕ್ಕಳ ಕ್ವಾರಂಟೈನ್ ಹಾಗೂ ಅಡ್ಮಿಷನ್ ಹಾಗೂ ಪ್ಲೇಸ್‌ಮೆಂಟ್ ಬಗ್ಗೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಈಗಾಗಲೇ ವಾಸ್ತವ್ಯವಿರುವ ಮಕ್ಕಳ

Scanned by CamScanner

ಸುರಕ್ಷತೆಯನ್ನು ಕಾಪಾಡುವುದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಅಲ್ಲದೇ ಹೊಸ ದಾಖಲಾತಿ ಮಕ್ಕಳ ಸಂಪೂರ್ಣ ಹಿತದೃಷ್ಟಿ ಕಾಪಾಡುವುದು ಸಹ ಜಿಲ್ಲಾಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಅದರಂತೆ ಎಲ್ಲಾ ಜಿಲ್ಲಾಧಿಕಾರಿಗಳು ಈ ಬಗ್ಗೆ ಹೆಚ್ಚಿನ ವೈಯಕ್ತಿಕ ಗಮನ ಹರಿಸಿ ಪ್ರಸ್ತುತ ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳಿಗೆ ಯಾವುದೇ ಸೋಂಕು ಹರಡದಂತೆ ಕಾಪಾಡಿಕೊಳ್ಳಲು ಹಾಗೂ ಹೊಸ ದಾಖಲಾತಿ ಮಕ್ಕಳಿಗೆ ಸಹ ಸೂಕ್ತ ಪಾಲನಾ ಮತ್ತು ರಕ್ಷಣೆ ವ್ಯವಸ್ಥೆಯನ್ನು ಒದಗಿಸಲು ಕೋರಲಾಗಿದೆ.

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಪ್ರಕಾರ ಪಾಲನೆ ಮತ್ತು ರಕ್ಷಣೆ ಅವಶ್ಯವಿರುವ ಹೊಸ ದಾಖಲಾತಿ ಮಕ್ಕಳ ವಿಷಯದಲ್ಲಿ ಮಕ್ಕಳ ಕಲ್ಯಾಣ ಸಮಿತಿಯೊಂದಿಗೆ ಹಾಗೂ ಕಾನೂನಿನ ಸಂಘರ್ಷಕ್ಕೆ ಒಳಪಟ್ಟ ಹೊಸ ದಾಖಲಾತಿ ಮಕ್ಕಳ ವಿಷಯದಲ್ಲಿ ಬಾಲನ್ಯಾಯ ಮಂಡಳಿಗಳೊಂದಿಗೆ ಸಮನ್ವಯ ಮಾಡಿಕೊಂಡು ಬಾಲಕರು ಮತ್ತು ಬಾಲಕಿಯರಿಗೆ ಪ್ರತ್ಯೇಕವಾಗಿ ಸೂಕ್ತ ಕ್ವಾರಂಟೈನ್ ವ್ಯವಸ್ಥೆಯನ್ನು ಜಿಲ್ಲಾ ಮಟ್ಟದಲ್ಲಿಯೇ ಮಾಡಿಕೊಳ್ಳಲು ಎಲ್ಲಾ ಜಿಲ್ಲಾಧಿಕಾರಿಗಳು ಹೆಚ್ಚಿನ ಕಾಳಜಿವಹಿಸಲು ಹಾಗೂ ವೈಯಕ್ತಿಕ ಗಮನಹರಿಸಲು ಈ ಮೂಲಕ ಕೋರಲಾಗಿದೆ.

ಅಲ್ಲದೇ ಮಕ್ಕಳ ಪಾಲನಾ ಸಂಸ್ಥೆಯಲ್ಲಿ ಈಗಾಗಲೇ ಇರುವ ಮಕ್ಕಳ ಹಾಗೂ ಅವರ ಪಾಲನಾ ಮತ್ತು ರಕ್ಷಣಾ ಸಿಬ್ಬಂದಿಯ ಹಾಗೂ ಹೊಸ ದಾಖಲಾತಿ ಮಗುವಿನ ಹಾಗೂ ಸದರಿ ಮಗುವಿನ ಪಾಲನಾ ಮತ್ತು ರಕ್ಷಣಾ ಸಿಬ್ಬಂದಿಯ ಇವರೆಲ್ಲರ ಆರೋಗ್ಯದ ಹಿತದೃಷ್ಟಿಯಿಂದ ಕಡ್ಡಾಯವಾಗಿ ಪ್ರತಿಯೊಂದು ಹೊಸ ದಾಖಲಾತಿ ಮಗುವಿನ ಕೋವಿಡ್-19 ಪರೀಕ್ಷೆಯನ್ನು ಮಗು ಇಲಾಖೆಯ ಅಧಿಕಾರ ವ್ಯಾಪ್ತಿಗೆ ಬಂದಕೂಡಲೇ ಆದಷ್ಟು ಶೀಘ್ರವಾಗಿ ಜಿಲ್ಲಾಡಳಿತವು ನೆರವೇರಿಸಬೇಕೆಂದು ಕೋರಲಾಗಿದೆ.

ಲಗತ್ತುಗಳು:
ಉಲ್ಲೇಖ 1 & 2

ತಮ್ಮ ವಿಶ್ವಾಸಿ,

ಅಪರ ಮುಖ್ಯ ಕಾರ್ಯದರ್ಶಿಗಳು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರೀಕರ
ಸಬಲೀಕರಣ ಇಲಾಖೆ, ಬೆಂಗಳೂರು.

ಪ್ರತಿಯನ್ನು:-

1) ಎಲ್ಲಾ ಬಾಲನ್ಯಾಯ ಮಂಡಳಿಗಳು.
2) ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳು.
3) ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು.

Scanned by CamScanner

ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ.ಕೆಎಸ್ಐಸಿಪಿಎಸ್/ಕೋವಿಡ್-19/53/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:25.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್-19ರ ಹಿನ್ನೆಲೆಯಲ್ಲಿ ಹೊಸದಾಗಿ ರೆಸ್ಕ್ಯೂ ಮಾಡಲಾದ ಪಾಲನೆ ಮತ್ತು ರಕ್ಷಣೆ ಅವಶ್ಯಕತೆ ಇರುವ ಮಕ್ಕಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಲಾಕ್‌ಡೌನ್‌ಗೆ ಸಂಬಂಧವಿಲ್ಲದೆ ಎಂದಿನಂತೆ ಸಂಕಟ ಸ್ಥಿತಿಯಲ್ಲಿರುವ ಮತ್ತು ಯಾವುದಾದರೂ ಸಮಸ್ಯೆಯಲ್ಲಿರುವ ಮಕ್ಕಳನ್ನು ಬಾಲನ್ಯಾಯ (ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ರನ್ವಯ ಎಂದಿನಂತೆ ರೆಸ್ಕ್ಯೂ ಮತ್ತು ರೀಹ್ಯಾಬಿಲಿಟೇಷನ್ ಮಾಡಲಾಗುತ್ತಿದೆ. ಈ ಮಕ್ಕಳಿಗೆ ಪಾಲನೆ ಮತ್ತು ರಕ್ಷಣೆ ಒದಗಿಸಬೇಕಾಗುತ್ತದೆ.

ಆದರೆ ಈಗಾಗಲೇ ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವಂತಹ ಮಕ್ಕಳು ಕೋವಿಡ್ ದೃಷ್ಟಿಯಲ್ಲಿ ಒಂದು ರೀತಿಯ ಸುರಕ್ಷಿತ ವಾತಾವರಣದಲ್ಲಿದ್ದು, ಈ ಮಕ್ಕಳೊಂದಿಗೆ ಹೊಸದಾಗಿ ರೆಸ್ಕ್ಯೂ ಮಾಡಲಾದ ಮಕ್ಕಳನ್ನು ಒಟ್ಟುಗೂಡಿಸುವುದು ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳ ಹಿತದೃಷ್ಟಿಯಿಂದ ಸೂಕ್ತವಾಗಿರುವುದಿಲ್ಲ.

ಮೇಲಿನ 2 ಅವಶ್ಯಕಗಳನ್ನು ಪೂರೈಸಬೇಕಾದರೆ ಹೊಸದಾಗಿ ರೆಸ್ಕ್ಯೂ ಮಾಡಲಾದ, ಹೊಸದಾಗಿ ದಾಖಲಾಗುವ ಮಕ್ಕಳನ್ನು ಈಗಾಗಲೇ ಮಕ್ಕಳ ಪಾಲನಾ ಸಂಸ್ಥೆಯಲ್ಲಿರುವ ಮಕ್ಕಳ ಜೊತೆ ಇಡದೆ ಬೇರೆಡೆ ಅವರಿಗೆ ವಾಸ್ತವ್ಯದ ವ್ಯವಸ್ಥೆ ಕಲ್ಪಿಸಬೇಕಾಗುತ್ತದೆ.

ಪ್ರಸ್ತುತ ಈ ಅವಶ್ಯಕತೆಗಳನ್ನು ಪೂರೈಸಲು ಮಕ್ಕಳ ಪಾಲನಾ ಸಂಸ್ಥೆಯಲ್ಲಿಯೇ ಇರುವ ಒಂದು ಕೊಠಡಿಯನ್ನು ಕ್ವಾರಂಟೈನ್ ಸೌಲಭ್ಯಕ್ಕಾಗಿ ಕಾಯ್ದಿರಿಸಿ ಹೊಸದಾಗಿ ದಾಖಲಾಗುವ ಮಕ್ಕಳನ್ನು ಸದರಿ ಕೊಠಡಿಯಲ್ಲಿರಿಸಲು ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಆದರೆ ಕ್ವಾರಂಟೈನ್‌ನಲ್ಲಿರಬೇಕಾದ ಮಕ್ಕಳು ಈ ಕೆಳಕಂಡ ಸಮಸ್ಯೆಗಳನ್ನು ಎದುರಿಸಬೇಕಾಗುತ್ತವೆ.

1) ಕ್ವಾರಂಟೈನ್‌ಗೆ ಒಳಪಡಿಸಿದ ಮಗು 2 ವಾರಗಳ ಕಾಲ ಒಬ್ಬಂಟಿಯಾಗಿ ಕೊಠಡಿಯಲ್ಲಿರಬೇಕಾಗುತ್ತದೆ. ಇದು ಮಾನಸಿಕವಾಗಿ ಹಲವಾರು ಸಮಸ್ಯೆಗಳನ್ನು ಸೃಜಿಸುತ್ತಿರುವುದು ಗಮನಕ್ಕೆ ಬಂದಿರುತ್ತದೆ. ಏಕೆಂದರೆ ಉಳಿದ ಮಕ್ಕಳೆಲ್ಲಾ ದಿನವಿಡೀ ಒಂದೆಡೆ ಸೇರಿ ಒಟ್ಟುಗೂಡಿ ಆಟವಾಡುವುದು ಮತ್ತಿತರೆ ಚಟುವಟಿಕೆಗಳಲ್ಲಿ ಕೂಡಿರುವುದನ್ನು ಈ ಕ್ವಾರಂಟೈನ್‌ನಲ್ಲಿರುವ ಮಗು ಗಮನಿಸಿದಾಗ ಆ ಮಗುವು ಮಾನಸಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.
2) ಅಲ್ಲದೇ ಪ್ರಸ್ತುತ ಇರುವ ಮಕ್ಕಳ ಪಾಲನಾ ಸಂಸ್ಥೆಯಲ್ಲಿಯೇ ಒಂದು ಕೊಠಡಿಯನ್ನು ಕ್ವಾರಂಟೈನ್‌ಗೆ ಮೀಸಲಿಡಿಸಿದ್ದಾಗ್ಯೂ ಹೊಸದಾಗಿ ಹೊರಗಿನಿಂದ ಮಗು ಮಕ್ಕಳ ಪಾಲನಾ ಸಂಸ್ಥೆಯ ಕ್ಯಾಂಪಸ್‌ಗೆ ಪ್ರವೇಶಿಸುವುದರಿಂದ ಇದು ಕೋವಿಡ್-19 ಹಿನ್ನೆಲೆಯಲ್ಲಿ ಸಂಪೂರ್ಣ ಸುರಕ್ಷತೆಯನ್ನು ಒದಗಿಸಿದಂತಾಗುವುದಿಲ್ಲ.

Scanned by CamScanner

ಮೇಲಿನ ಎಲ್ಲಾ ಕಾರಣಗಳಿಂದ ಹೊಸದಾಗಿ ದಾಖಲಾದ ಮಕ್ಕಳನ್ನು ಸಂಪೂರ್ಣವಾಗಿ ಬೇರೆ ಕ್ಯಾಂಪಸ್‌ನಲ್ಲಿ ಮಾತ್ರ ವ್ಯವಸ್ಥೆ ಕಲ್ಪಿಸುವುದು ಸೂಕ್ತವೆಂದು ಭಾವಿಸಲಾಗಿದೆ. ಆದ್ದರಿಂದ ಭವಿಷ್ಯದಲ್ಲಿ ಅಥವಾ ಈ ಪತ್ರದ ದಿನಾಂಕದಿಂದ ಈ ರೀತಿಯ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಲಾಗಿದೆ.

1) ಜಿಲ್ಲೆಯಲ್ಲಿ ಕೋವಿಡ್-19 ಹಿನ್ನೆಲೆಯಲ್ಲಿ ಬಹುತೇಕ ಮಕ್ಕಳನ್ನು ಪೋಷಕರ ವಶಕ್ಕೆ ನೀಡಲಾಗಿರುವ ಹಿನ್ನೆಲೆಯಲ್ಲಿ ಯಾವುದಾದರೂ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಇಲಾಖೆಗೆ ಸಂಬಂಧಪಟ್ಟ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳಿಲ್ಲದೇ ಖಾಲಿ ಇದ್ದಲ್ಲಿ ಅಥವಾ 1, 2 ಮಕ್ಕಳಿದ್ದಲ್ಲಿ ಅಂತಹ ಮಕ್ಕಳ ಪಾಲನ ಸಂಸ್ಥೆಗಳನ್ನು ಫಿಟ್ ಫೆಸಿಲಿಟಿ ಎಂದು ಪರಿಗಣಿಸಿ ಹೊಸ ದಾಖಲಾತಿ ಮಕ್ಕಳನ್ನು ಅಲ್ಲಿ ವಾಸ್ತವ್ಯವಿರಿಸಬಹುದು. **ಈ ಆಪ್ಷನ್‌ಗೆ ಪ್ರಥಮ ಆದ್ಯತೆಯನ್ನು ನೀಡುವುದು.**

2) ನಮ್ಮ ಇಲಾಖೆಯ ಯಾವುದೇ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಖಾಲಿ ಇಲ್ಲದ ಸಂದರ್ಭದಲ್ಲಿ ಜಿಲ್ಲೆಯಲ್ಲಿರುವ ಯಾವುದಾದರೊಂದು ಸಮಾಜ ಕಲ್ಯಾಣ ಇಲಾಖೆ/ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ/ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ ವಸತಿ ಗೃಹ ಇಂತಹ ಸರ್ಕಾರಿ ಸ್ವಾಮ್ಯದ ವಸತಿಗೃಹಗಳ ಸೌಕರ್ಯವಿರುವ ಕಡೆ ಪ್ರಸ್ತುತ ಮಕ್ಕಳು ಯಾರೂ ಇಲ್ಲದೇ ಖಾಲಿ ಇರುವುದರಿಂದ ಆ ವಸತಿಗೃಹಗಳನ್ನೇ ಬಾಲಕಿಯರ ಮತ್ತು ಬಾಲಕರ ಪ್ರತ್ಯೇಕ ಫಿಟ್ ಫೆಸಿಲಿಟಿಗಳನ್ನಾಗಿ ಮಕ್ಕಳ ಕಲ್ಯಾಣ ಸಮಿತಿಯ ಮೂಲಕ ಗುರುತಿಸಿ ತಾತ್ಕಾಲಿಕವಾಗಿ ಪರಿವರ್ತಿಸಿ ಹೊಸದಾಗಿ ರೆಸ್ಕ್ಯೂ ಮಾಡಲಾದ ಮಕ್ಕಳನ್ನು ಇಂತಹ ಫಿಟ್ ಫೆಸಿಲಿಟಿಗಳಲ್ಲಿ ಪಾಲನೆ ಮತ್ತು ರಕ್ಷಣೆ ನೀಡುವುದು ಸೂಕ್ತ. ಇದರ ಸಲುವಾಗಿ ಸದರಿ ವಸತಿಗೃಹದ ಕರ್ತವ್ಯ ನಿರತ ಸಿಬ್ಬಂದಿಯಿಂದಲೇ ಈ ಮಕ್ಕಳನ್ನು ನೋಡಿಕೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಬಹುದು.

3) ಮೇಲೆ ತಿಳಿಸಿದಂತೆ ಐಸಿಪಿಎಸ್ ಇಲಾಖೆಯ ಹೊರತು ಬೇರೆ ಇಲಾಖೆಯ ವಸತಿಗೃಹಗಳನ್ನು ತಾತ್ಕಾಲಿಕವಾಗಿ ಫಿಟ್ ಫೆಸಿಲಿಟಿಗಳೆಂದು ಬಳಸಿಕೊಳ್ಳುವ ಸಂದರ್ಭದಲ್ಲಿ ಹಾಲಿ ಸದರಿ ವಸತಿಗೃಹದ ಕರ್ತವ್ಯ ನಿರತ ಸಿಬ್ಬಂದಿಗಳಿಗೆ ಸಮಗ್ರ ಮಕ್ಕಳ ರಕ್ಷಣಾ ಯೋಜನೆ ಬಗ್ಗೆ ಒಂದು ಓರಿಯಂಟೇಷನ್ ತರಬೇತಿಯನ್ನು ಕೊಡಬೇಕಾಗುತ್ತದೆ.

4) ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಹೀಗೆ ಗುರಿತಿಸಲ್ಪಟ್ಟ ಫಿಟ್ ಫೆಸಿಲಿಟಿಗಳಲ್ಲಿ ದಾಖಲಾದ ಮಕ್ಕಳಿಗೆ ಈಗಾಗಲೇ ಇಲಾಖಾ ವತಿಯಿಂದ ನಡೆಯುತ್ತಿರುವ ಮಕ್ಕಳ ಪಾಲನ ಸಂಸ್ಥೆಗಳಲ್ಲಿರುವ ಮಕ್ಕಳಿಗೆ ಯಾವ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆಯೇ ಅವೆಲ್ಲವನ್ನೂ ಈ ಮಕ್ಕಳಿಗೂ ಸಹ ದೊರಕುವಂತೆ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ ಒಬ್ಬ ಕೌನ್ಸಿಲರ್ ಸೇವೆಯನ್ನೂ ಒದಗಿಸಲು ಪ್ರತ್ಯೇಕ ವ್ಯವಸ್ಥೆ ಮಾಡಬೇಕು.

5) ಈ ಪರ್ಯಾಯ ವ್ಯವಸ್ಥೆಯು ಕೋವಿಡ್-19 ಸಹಜ ಸ್ಥಿತಿಗೆ ಬರುವವರೆಗೆ ಅಥವಾ ಮಕ್ಕಳು ಶಾಲೆಗೆ ಮರಳಿ ಬರುವವರೆಗೆ, ಯಾವುದು ಮೊದಲೋ ಅದು ಅನ್ವಯವಾಗುವುದು.

6) ಮೇಲಿನಂತೆ ಹೊಸದಾಗಿ ದಾಖಲಾದ ಮಕ್ಕಳಿಗಾಗಿ ಆಯ್ಕೆ ಮಾಡಲಾದ(ಬಾಲಕರು ಮತ್ತು ಬಾಲಕಿಯರು ಪ್ರತ್ಯೇಕವಾಗಿ) ಫಿಟ್ ಫೆಸಿಲಿಟಿಗಳ ಸಿಬ್ಬಂದಿ ವೇತನಕ್ಕಾಗಿ ಸಮಗ್ರ ಮಕ್ಕಳ ರಕ್ಷಣಾ ಯೋಜನೆಯಿಂದ ಯಾವುದೇ ಅನುದಾನವನ್ನು ಒದಗಿಸಲು ಬರುವುದಿಲ್ಲ. ಕೇವಲ ಮಕ್ಕಳ ಊಟೋಪಚಾರದ ವೆಚ್ಚವನ್ನು ಮಾತ್ರ ಐಸಿಪಿಎಸ್ ಯೋಜನೆಯ ವತಿಯಿಂದ ಭರಿಸಬಹುದಾಗಿದೆ. ಯೋಜನೆಯ ಮಾರ್ಗದರ್ಶನಗಳ ಪ್ರಕಾರ ಒಂದು ಮಗುವಿಗೆ ಒಂದು ತಿಂಗಳಿಗೆ ಊಟೋಪಚಾರಕ್ಕಾಗಿ ರೂ.1500/-ಗಳ ವೆಚ್ಚವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಾದಿಲ್ವಾರು ವೆಚ್ಚದ ಅಡಿಯಲ್ಲಿ ಪ್ರಚಲಿತದಲ್ಲಿರುವ ನಿಯಮಾನುಸಾರ ಭರಿಸಬಹುದಾಗಿದೆ.

Scanned by CamScanner

ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಈಗಾಗಲೇ ಇರುವ ಮಕ್ಕಳ ಆರೋಗ್ಯದ ಹಿತದೃಷ್ಟಿಯಿಂದ ಈ ರೀತಿ ಪ್ರತ್ಯೇಕವಾಗಿ ಜಿಲ್ಲಾ ಮಟ್ಟದಲ್ಲಿ ಯಾವುದಾದರೊಂದು ಲಭ್ಯವಿರುವ ವ್ಯವಸ್ಥೆಯನ್ನು ಫಿಟ್ ಫೆಸಿಲಿಟಿಯನ್ನಾಗಿ ಮಾಡಿಕೊಂಡು ಹೊಸ ದಾಖಲಾತಿಯನ್ನು ಇಲ್ಲೇ ನಿರ್ವಹಿಸಬಹುದಾಗಿದೆ.

ಆದ್ದರಿಂದ ಹೊಸದಾಗಿ ದಾಖಲಾದ ಎಲ್ಲಾ ಮಕ್ಕಳಿಗೆ ಪಾಲನೆ ಮತ್ತು ರಕ್ಷಣೆ ಒದಗಿಸಲು ಜಿಲ್ಲಾಡಳಿತದೊಂದಿಗೆ ಸಂಪರ್ಕಿಸಿ ಈ ರೀತಿ ಬಾಲಕಿಯರ ಮತ್ತು ಬಾಲಕರಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಂಡಿರುವ ವ್ಯವಸ್ಥೆಯ ಬಗ್ಗೆ ಕೇಂದ್ರ ಕಛೇರಿಗೆ ಅನುಪಾಲನಾ ವರದಿಯನ್ನು 3 ದಿನಗಳೊಳಗೆ ಲಗತ್ತಿಸಿದ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ.

ಕು. ಯಲ್ಲವ್ವ, ಸಂಶೋಧನಾಧಿಕಾರಿ, ಕೇಂದ್ರ ಕಛೇರಿ ಇವರು ಈ ಬಗ್ಗೆ ಎಲ್ಲಾ ಜಿಲ್ಲೆಗಳೊಂದಿಗೆ ಫಾಲೋಅಪ್ ಮಾಡಿ ಮೇಲಿನ ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಂಡಿರುವ ಬಗ್ಗೆ 30 ಜಿಲ್ಲೆಗಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳೊಂದಿಗೆ ಖಚಿತಪಡಿಸಿಕೊಳ್ಳತಕ್ಕದ್ದು ಹಾಗು ಈ ಬಗ್ಗೆ ಲಗತ್ತಿಸಿದ ನಮೂನೆಯಂತೆ ಮಾಹಿತಿಯನ್ನು ಕ್ರೂಢೀಕರಿಸಿ ನಿರ್ದೇಶಕರಿಗೆ ಸಲ್ಲಿಸತಕ್ಕದ್ದು.

ತಮ್ಮ ವಿಶ್ವಾಸಿ,

25.04.2020

ನಿರ್ದೇಶಕರು,

ಸಮಗ್ರ ಮಕ್ಕಳ ರಕ್ಷಣಾ ಯೋಜನೆ,

ಬೆಂಗಳೂರು.

Scanned by CamScanner

## Arrangements for New Admissions in the COVID-19 situation

| Sl.No. | District Name | Name of the Institution Identified for New Admission of Boys | Name of the Institution Identified for New Admission of Girls | Remarks |
|---|---|---|---|---|

Scanned by CamScanner

ಕರ್ನಾಟಕ ಸರ್ಕಾರ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ

ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/59/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:28.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್-19ರ ಹಿನ್ನೆಲೆಯಲ್ಲಿ ಹೊಸದಾಗಿ ರೆಸ್ಕ್ಯೂ ಮಾಡಲಾದ ಮಕ್ಕಳಿಗೆ ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015ರ ಅಡಿಯಲ್ಲಿ ಸೂಕ್ತ ಪುನರ್ವಸತಿ ಕಲ್ಪಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಪತ್ರ ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19 53/2020-21 ದಿನಾಂಕ:25.04.2020

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್-19 ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕ್ವಾರಂಟೈನ್‌ನಲ್ಲಿ ಇಡಲು ಅನುಕೂಲವಾಗುವಂತೆ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ರ ಅಡಿಯಲ್ಲಿ ಹೊಸದಾಗಿ ರೆಸ್ಕ್ಯೂ ಮಾಡಲಾದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಸಲುವಾಗಿ ಬಾಲಕರಿಗೆ ಮತ್ತು ಬಾಲಕಿಯರಿಗೆ ಪ್ರತ್ಯೇಕ ಕ್ವಾರಂಟೈನ್ ಸೌಲಭ್ಯವನ್ನು ವ್ಯವಸ್ಥೆ ಮಾಡಲು ಉಲ್ಲೇಖಿತ ಪತ್ರದಲ್ಲಿ ಈಗಾಗಲೇ ಸೂಚಿಸಲಾಗಿತ್ತು. ಮುಂದುವರೆದು ಈ ಕುರಿತು ಈ ಕೆಳಕಂಡಂತೆ ಸ್ಪಷ್ಟೀಕರಣ ನೀಡಲಾಗಿದೆ.

ಉಲ್ಲೇಖಿತ ಪತ್ರದ ವಿಷಯದ ಬಗ್ಗೆ ಕೆಲವು ಜಿಲ್ಲೆಗಳಿಂದ ಕೆಲವು ಪರಿಶೀಲನೆಗಳನ್ನು ಸ್ವೀಕರಿಸಲಾಗಿದೆ. ಹಾಗೂ ಕೆಲವು ಜಿಲ್ಲೆಗಳಿಂದ ಕೆಲವು ಸ್ಪಷ್ಟೀಕರಣಗಳನ್ನು ನೀಡಲು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಸ್ಪಷ್ಟೀಕರಣವನ್ನು ನೀಡಲಾಗುತ್ತಿದೆ.

ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆ ತುಂಬಾ ವಿಶಾಲವಾಗಿದ್ದು ಅದರಲ್ಲಿಯೇ ಸೌಕರ್ಯಯುತವಾಗಿ ಹೊಸ ದಾಖಲಾತಿ ಮಕ್ಕಳಿಗೆ ಕ್ವಾರಂಟೈನ್ ಆರಾಮವಾಗಿ ಮಾಡಬಹುದು ಎನಿಸಿದಲ್ಲಿ

ಅಥವಾ

ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗೆ ಪ್ರತ್ಯೇಕ ಮಹಡಿಗಳಿದ್ದರೆ ಅದರಲ್ಲಿ ಒಂದು ಮಹಡಿಯನ್ನು ಕ್ವಾರಂಟೈನ್‌ಗಾಗಿ ಕಾಯ್ದಿರಿಸಬಹುದು ಎಂದು ಅಭಿಪ್ರಾಯಿಸಿದಲ್ಲಿ

ಅಥವಾ

ಉಲ್ಲೇಖಿತ ಪತ್ರದಲ್ಲಿ ಈ ಹಿಂದೆ ತಿಳಿಸಲಾದ ಆಪ್ಷನ್‌ಗಳಿಗೆ ಅನುಗುಣವಾಗಿ ವ್ಯವಸ್ಥೆ ಕಲ್ಪಿಸಿಕೊಳ್ಳಬೇಕಾದಲ್ಲಿ

ಮೇಲಿನಂತೆಯೇ ಇರುವ ಆಪ್ಷನ್ಸ್‌ಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧ್ಯಕ್ಷರಾದ ಜಿಲ್ಲಾಧಿಕಾರಿಗಳು ಇವರ ನೇತೃತ್ವದಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಹಾಗೂ ಬಾಲನ್ಯಾಯ ಕಾಯ್ದೆ ಹಾಗೂ ನಿಯಮಾವಳಿ ಪ್ರಕಾರ ಮಕ್ಕಳ ಪ್ಲೇಸ್‌ಮೆಂಟ್ ಬಗ್ಗೆ ನಿರ್ಧಾರ ಕೈಗೊಳ್ಳ ಬೇಕಾದ ಬಾಲನ್ಯಾಯ ಮಂಡಳಿ ಹಾಗೂ ಮಕ್ಕಳ ಕಲ್ಯಾಣ ಸಮಿತಿ ಇವರು ಆಯಾ ಜಿಲ್ಲೆಗಳಲ್ಲಿ

Scanned by CamScanner

2

ಜಿಲ್ಲಾ ಮಟ್ಟದಲ್ಲಿ ಕ್ಷೇತ್ರದ ಸಂದರ್ಭ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಸೂಕ್ತ ನಿರ್ಧಾರ ಕೈಗೊಳ್ಳತಕ್ಕದ್ದು.

ಮಕ್ಕಳ ಪಾಲನಾ ಕೇಂದ್ರಗಳಲ್ಲಿ ಈಗಾಗಲೇ ಇರುವ ಮಕ್ಕಳ ಹಿತದೃಷ್ಟಿಯಿಂದ ಹಾಗೂ ಬಾಲನ್ಯಾಯ ಕಾಯ್ದೆಯನುಸಾರ ಆಗಿಂದಾಗ್ಗೆ ರೆಸ್ಕ್ಯೂ ಮಾಡಲಾಗುತ್ತಿರುವ ಹೊಸ ದಾಖಲಾತಿ ಮಕ್ಕಳ ಹಿತದೃಷ್ಟಿಯಿಂದ ಕೇಂದ್ರ ಕಛೇರಿಯಿಂದ ಉಲ್ಲೇಖಿತ ಪತ್ರ ಮತ್ತು ಈ ಪತ್ರದನ್ವಯ ನೀಡಲಾದ ಆಪ್ಷನ್‌ಗಳನ್ನು ಆಪ್ಷನ್‌ಗಳೆಂದು ಮಾತ್ರ ಪರಿಗಣಿಸಿ ಆಯಾ ಜಿಲ್ಲಾ ಮಟ್ಟದ ಪರಿಸ್ಥಿತಿಗಳಿಗೆ ಅನುಗುಣವಾಗಿ ಸೂಕ್ತ ಆಪ್ಷನ್‌ನ್ನು ಜಿಲ್ಲಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬಾಲನ್ಯಾಯ ಮಂಡಳಿ ಮತ್ತು ಮಕ್ಕಳ ಕಲ್ಯಾಣ ಸಮಿತಿ ಸಮನ್ವಯದೊಂದಿಗೆ ಆಯಾ ಜಿಲ್ಲೆಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಕ್ಷೇತ್ರದ ಸಂದರ್ಭ ಹಾಗೂ ಪರಿಸ್ಥಿತಿಗಳಿಗೆ ಅನುಗುಣವಾಗಿ ಸೂಕ್ತ ನಿರ್ಧಾರವನ್ನು ಜಿಲ್ಲಾ ಮಟ್ಟದಲ್ಲಿಯೇ ಕೈಗೊಳ್ಳುವುದು.

ಒಂದು ವೇಳೆ ಹೊಸ ದಾಖಲಾತಿ ಮಕ್ಕಳನ್ನು ಕೋವಿಡ್-19 ಸಲುವಾಗಿ ಉಲ್ಲೇಖಿತ ಪತ್ರದಂತೆ ಪ್ರತ್ಯೇಕ ಫಿಟ್ ಫೆಸಿಲಿಟಿ ಸಂಸ್ಥೆಗಳಲ್ಲಿ ಕ್ವಾರಂಟೈನ್/ಪುನರ್ವಸತಿ ವ್ಯವಸ್ಥೆ ಕಲ್ಪಿಸಲು ಜಿಲ್ಲಾ ಮಟ್ಟದಲ್ಲಿ ಬಾಲನ್ಯಾಯ ಮಂಡಳಿ ಅಥವಾ ಮಕ್ಕಳ ಕಲ್ಯಾಣ ಸಮಿತಿ ನಿರ್ಧಾರ ಕೈಗೊಂಡಲ್ಲಿ ಬಾಲನ್ಯಾಯ ಕಾಯ್ದೆ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಮತ್ತು ಬಾಲನ್ಯಾಯ ಕಾಯ್ದೆ ನಿಯಮಾವಳಿಗಳ ನಿಯಮ 2016ರ ಪ್ರಕಾರ ಸದರಿ ಪ್ರತ್ಯೇಕ ವ್ಯವಸ್ಥೆ ಬಗ್ಗೆ ನಿಯಮ 27 ರನ್ವಯ ಫಿಟ್ ಫೆಸಿಲಿಟಿ ಎಂದು ನಮೂನೆ 39ರಲ್ಲಿ ಮಕ್ಕಳ ಕಲ್ಯಾಣ ಸಮಿತಿಯಿಂದ ಅಥವಾ ಬಾಲನ್ಯಾಯ ಮಂಡಳಿಯಿಂದ ಸಂದರ್ಭಕ್ಕನುಗುಣವಾಗಿ ಫಿಟ್ ಫೆಸಿಲಿಟಿ ಎಂದು ಗುರುತಿಸಿಕೊಳ್ಳತಕ್ಕದ್ದು ಹಾಗೂ ರೆಸ್ಕ್ಯೂ ಮಾಡಲಾದ ಪ್ರತೀ ಮಗುವಿಗೂ ನಮೂನೆ 18ರ ಪ್ರಕಾರ ಆರ್ಡರ್ ಆಫ್ ಪ್ಲೇಸ್‌ಮೆಂಟ್ ಆದೇಶ ಪಡೆಯತಕ್ಕದ್ದು.

ಸದರಿ ಫಿಟ್ ಫೆಸಿಲಿಟಿ ವ್ಯವಸ್ಥೆಯಲ್ಲಿರುವ ಮಕ್ಕಳ ಹಿತದೃಷ್ಟಿಯಿಂದ ಈ ಕೆಳಕಂಡಂತೆ ಕ್ರಮಕೈಗೊಳ್ಳುವುದು.

1) ಮುಖ್ಯವಾಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ವತಿಯಿಂದ ಪಾಳಿಯ ಮೇಲೆ ದಿನನಿತ್ಯ ಬೆಳಗ್ಗೆ ಮತ್ತು ರಾತ್ರಿ ವೇಳೆಯಲ್ಲಿ ಒಬ್ಬೊಬ್ಬರು ಸಿಬ್ಬಂದಿ ಸದರಿ ಸಂಸ್ಥೆಯಲ್ಲಿರುವ ಮಕ್ಕಳಿಗೆ ಎಲ್ಲಾ ಸೌಲಭ್ಯಗಳು ಲಭ್ಯವಾಗುತ್ತಿರುವ ಬಗ್ಗೆ ಮೇಲ್ವಿಚಾರಣೆ ಮಾಡಲು ಸಂಸ್ಥೆಯಲ್ಲಿಯೇ ಇರಲು ಆದೇಶ ಹೊರಡಿಸುವುದು.
2) ಪ್ರತಿ ದಿನ ಒಬ್ಬರು ಕೌನ್ಸಿಲರ್ ಭೇಟಿ ನೀಡಿ ಮಕ್ಕಳಿಗೆ ಸಮಾಲೋಚನೆ ಮಾಡತಕ್ಕದ್ದು.
3) ಜಿಲ್ಲಾಧಿಕಾರಿಗಳ ಸಹಕಾರದಿಂದ ಕಾನ್‌ಸ್ಟೇಬಲ್ ಸೇವೆಯನ್ನು ಪಡೆಯುವುದು. ಹಗಲು ಮತ್ತು ರಾತ್ರಿ ಪಾಳಿಗೆ ಒಬ್ಬೊಬ್ಬರಂತೆ ಕಾನ್‌ಸ್ಟೇಬಲ್ ಅಲ್ಲಿಯೇ ವಾಸ್ತವ್ಯವಿದ್ದು, ಮಕ್ಕಳಿಗೆ ನಿರಂತರ ರಕ್ಷಣೆಯನ್ನು ಒದಗಿಸಲು ವ್ಯವಸ್ಥೆ ಮಾಡುವುದು.
4) ಈ ಮಕ್ಕಳಿಗೆ ವಿವಿಧ ಚಟುವಟಿಕೆಗಳನ್ನು ಏರ್ಪಡಿಸಿ ಒಂಟಿತನದಿಂದ ಬೇಸರವಾಗದಂತೆ ನೋಡಿಕೊಳ್ಳಲು ಕ್ರಮವಹಿಸುವುದು.
5) ಮಕ್ಕಳಿಗೆ ದಿನನಿತ್ಯ ಇನ್ಫ್ರಾರೆಡ್ ಡಿಜಿಟಲ್ ನಾನ್ ಕಾಂಟ್ಯಾಕ್ಟ್ ಥರ್ಮಾಮೀಟರ್‌ರಿಂದ ತಾಪಮಾನವನ್ನು ಪರೀಕ್ಷಿಸುವುದು. ಇದನ್ನು ಮಗುವಾರು ವಹಿಯಲ್ಲಿ ನಿರ್ವಹಿಸುವುದು ಹಾಗೂ ನಿಯಮಿತವಾಗಿ ವೈದ್ಯಕೀಯ ತಪಾಸಣೆ ನಡೆಸುವುದು.

ಬಾಲನ್ಯಾಯ ಕಾಯ್ದೆ ಅಡಿಯಲ್ಲಿ ಹೊಸ ದಾಖಲಾತಿ ಮಕ್ಕಳ ವಿಷಯದಲ್ಲಿ ಶ್ರೀಮತಿ ಸಿಂಧು ನಾಯಕ್, ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಚೈಲ್ಡ್ ವೆಲ್‌ಫೇರ್ ಇವರು ಮಕ್ಕಳ ರಕ್ಷಣಾ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಲವು ಪರಿಣಿತರ ಸಹಕಾರ ಮತ್ತು ಸಮನ್ವಯದೊಂದಿಗೆ

Scanned by CamScanner

1. "Advisory for Admission and Placement of Children in Need of Care and Protection and Children in Conflict with Law" and

2. "Checklist for Potential Fit Facilities for COVID-19 Quarantaine Care for CNCP and CICL"

ಇವುಗಳನ್ನು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಮಾರ್ಗದರ್ಶನಗಳ ಅನ್ವಯ ರೂಪಿಸಿದ್ದು ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಿಗೆ, ಬಾಲನ್ಯಾಯ ಮಂಡಳಿಗಳು ಹಾಗೂ ಮಕ್ಕಳ ಕಲ್ಯಾಣ ಸಮಿತಿಗಳಿಗೆ ಬಹಳ ಉಪಯುಕ್ತವಾಗುವುದರಿಂದ ಅವುಗಳನ್ನು ಗಮನಕ್ಕೆ ಹಾಗೂ ಅವಶ್ಯಕ ಕ್ರಮಕ್ಕಾಗಿ ಈ ಪತ್ರಕ್ಕೆ ಲಗತ್ತಿಸಿದ ಅನುಬಂಧದಲ್ಲಿ ಒದಗಿಸಲಾಗುತ್ತಿದೆ. ಈ ಅಡ್ವೈಜರಿ ಮತ್ತು ಚೆಕ್‌ಲಿಸ್ಟ್‌ಗಳನ್ನು ಇಲಾಖೆಗೆ ಒದಗಿಸಿದ ಸದರಿ ತಜ್ಞರಿಗೆ ಧನ್ಯವಾದಗಳು. ಈ ಅಡ್ವೈಜರಿ ಮತ್ತು ಚೆಕ್‌ಲಿಸ್ಟ್‌ಗಳನ್ನು ನಿಮ್ಮ ಜಿಲ್ಲೆಯ ಬಾಲನ್ಯಾಯ ಮಂಡಳಿ ಹಾಗೂ ಮಕ್ಕಳ ಕಲ್ಯಾಣ ಸಮಿತಿಗಳಿಗೆ ತಲುಪಿಸುವುದು.

**ಕೋವಿಡ್-19ರ ಹಿನ್ನೆಲೆಯಲ್ಲಿ ಕೇಂದ್ರ ಕಛೇರಿಯಿಂದ ನೀಡಲಾಗುತ್ತಿರುವ ಯಾವುದೇ ಮಾರ್ಗದರ್ಶನ ಅಥವಾ ನಿರ್ದೇಶನಗಳನ್ನು ಅನುಪಾಲಿಸುವಾಗ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015 ಹಾಗೂ ಬಾಲನ್ಯಾಯ(ಮಕ್ಕಳ ಪಾಲನೆ ಮತ್ತು ರಕ್ಷಣೆ) ನಿಯಮಾವಳಿ 2016ರ ಲೀಗಲ್ ಪ್ರಾವಿಜನ್ಸ್‌ಗಳನ್ನು ಕಡ್ಡಾಯವಾಗಿ ಅನುಪಾಲಿಸತಕ್ಕದ್ದು.**

ತಮ್ಮ ವಿಶ್ವಾಸಿ,

28.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

Scanned by CamScanner